C.C.No.1241/2021
PW-6
CW-10

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**

**ಸಿ.ಸಿ. ಸಂಖ್ಯೆ 1241/2021**

**ಪ್ರಾಸಾಃ 06**

**ಚಾಸಾಃ 10**

**ದಿನಾಂಕ 30.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿದಾರರ ಹೆಸರು | - | ಕೃಷ್ಣಮೂರ್ತಿ |
| ತಂದೆಯ ಹೆಸರು | - | ನರಸಿಂಹಪ್ಪ |
| ವಯಸ್ಸು | - | 57 ವರ್ಷ |
| ವೃತ್ತಿ | - | ಸಮಾಜ ಸೇವಕ |
| ವಾಸ ಸ್ಥಳ | - | ಕನ್ನಮೇಡಿ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ**

ಸಾಕ್ಷಿಗೆ ದಿ.**29.09.2020** ರ ದೃಢೀಕೃತ ಮಹಜರ್ ನ್ನು ತೋರಿಸಲಾಯಿತು. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿ.**29.09.2020** ರಂದು ಪಾವಗಡ ಪೋಲಿಸ್ ಠಾಣೆಯಲ್ಲಿ ಮಹಜರ್ ಬರೆದಾಗ ಸಹಿ ಮಾಡಿದ್ದೇನೆ. ಒಂದು ಕಳ್ಳತನ ವಿಚಾರವಾಗಿ ಪೋಲಿಸ್ ಮಹಜರ್ ಬರೆದಿದ್ದರು. ಆ ಸಮಯದಲ್ಲಿ ಒಂದು ಬೈಕ್, ಒಂದು ಸ್ಕ್ರೂಡ್ರೈವರ್, ಒಂದು ರಾಡು, ಒಂದು ಆಕ್ಸಲ್ ಬ್ಲೇಡ್ ನ್ನು ನನ್ನ ಮತ್ತು ಧನಂಜಯ್ ರವರ ಸಮಕ್ಷಮ ಬರೆದಿದ್ದಾರೆ. ನನ್ನ ಭಾವಚಿತ್ರವನ್ನು ಸಹ ತೆಗೆದಿದ್ದಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಪಿ.ಹೆಚ್.ಎಸ್ ವಕೀಲರಿಂದ</u>

ನಾನು ಕನ್ನಮೇಡಿಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ನಾನು ಆಗಾಗ ಪೋಲಿಸ್ ಠಾಣೆಗೆ ಹೋಗುತ್ತಿರುತ್ತೇನೆ ಎಂದರೆ ಸರಿ. ನಾನು ಹೊಟ್ಟಪಾಡಿಗೆ ವ್ಯವಸಾಯ ಮಾಡುತ್ತೇನೆ ಅದರ ಜೊತೆಗೆ ಸಮಾಜ ಸೇವೆ ಮಾಡುತ್ತೇನೆ. ಮಹಜರ್ ಗೆ ಬನ್ನಿ ಎಂದು ನನಗೆ ನೋಟಿಸ್ ಕೊಟ್ಟಿರುವುದಿಲ್ಲ. ನಮ್ಮ ಊರಿನಲ್ಲಿ ಕಳ್ಳತನವಾದ ವಸ್ತುಗಳು ಸಿಕ್ಕಿವೆ ಎಂದು ನೋಡಲು ಹೋದಾಗ ಸಹಿ ಮಾಡಿದ್ದೇನೆ. ಪೊಲಿಸ್ ನವರು ಮಹಜರ್ ಗೆ ಬನ್ನಿ ಎಂದು ನನಗೆ ಕರೆದಿಲ್ಲ. ಕತ್ತಲಾಗಿರುವುದರಿಂದ ವಾಹನ ಯಾವ ಕಂಪನಿಯದು ಎಂದು ನೋಡಿಲ್ಲ. ನಾನು ಪೋಲಿಸ್ ಠಾಣೆಯಲ್ಲಿ 7.00- 8.00 ಗಂಟೆ ವರಗೊ ಇದ್ದೆನು ಆಗ ಸದರಿ ಸಹಿಗಳನ್ನು ಮಾಡಿರುತ್ತೇನೆ. ಪೋಲಿಸ್ ನವರು ಮುದ್ದೆ ಮಾಲುಗಳನ್ನು ನನಗೆ ತಂದು ತೋರಿಸಿದ್ದರು ಎಂದರೆ ಸರಿಯಲ್ಲ. ನಾನು ಇದೆ ಮೊದಲ ಬಾರಿಗೆ ಮುದ್ದೆ ಮಾಲುಗಳನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸ್ ರವರು ಬರೆದುಕೊಂಡ ಮಹಜರ್ ಗೆ ಸಹಿ ಮಾಡಿದ್ದೆನೆ ಎಂದರೆ ಸರಿಯಲ್ಲ. ಆರೋಪಿತರನ್ನು ಇದೆ ಮೊದಲಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಊರಿನವರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಗೆ ಹೋದಾಗ ಸ್ವಾಗತಕಾರರ ಬಳಿ ಇರುವ ಪುಸ್ತಕಕ್ಕೆ ಸಹಿ ಮಾಡಿರುವುದಿಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಹಣ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಬೈಕ್ ನ್ನು ಮತ್ತು ಸ್ಕ್ರೂಡ್ರೈವರ್, ರಾಡ್, ಆಕ್ಸಲ್ ಬ್ಲೇಡ್ ನ್ನು ಬೇರೆ ಬೇರೆ ತೋರಿಸಿಲ್ಲ ಎಂದರೆ ಸರಿ.

ಮರುವಿಚಾರಣೆಃಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು.)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ

C.C.No.1241/2021
PW-6
CW-10